## ಸ್ಪರ್ಧಾತ್ಮಕ ಪರೀಕ್ಷೆ 2016

| ದಿನಾಂಕ | ವಿಷಯ | ಸಮಯ |
|---|---|---|
| 06-05-2016 | ಸಾಮಾನ್ಯ ಕನ್ನಡ ಮತ್ತು ಸಾಮಾನ್ಯ ಜ್ಞಾನ | ಬೆ.10.30 ರಿಂದ 12.30 ರ ವರೆಗೆ |

| ಗರಿಷ್ಠ ಅಂಕಗಳು | ಒಟ್ಟು ಅವಧಿ | ಉತ್ತರಿಸಲು ಇರುವ ಗರಿಷ್ಠ ಅವಧಿ |
|---|---|---|
| 100 (ಪ್ರತಿ ವಿಷಯಕ್ಕೆ 50 ಅಂಕಗಳು) | 150 ನಿಮಿಷಗಳು | 120 ನಿಮಿಷಗಳು |

| ನಿಮ್ಮ ನೊಂದಣಿ ಸಂಖ್ಯೆಯನ್ನು ಬರೆಯಿರಿ | ಪ್ರಶ್ನೆಪತ್ರಿಕೆಯ ವಿವರಗಳು | |
|---|---|---|
| | ವರ್ಷನ್ ಕೋಡ್ | ಕ್ರಮ ಸಂಖ್ಯೆ |
| | **C-1** | 026787 |

**ಮಾಡಿ**

1. ನೊಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
2. ಕೊಠಡಿ ಮೇಲ್ವಿಚಾರಕರಿಂದ ಈ ಪ್ರಶ್ನೆ ಪತ್ರಿಕೆಯನ್ನು ನಿಮಗೆ 2ನೇ ಬೆಲ್ ಆದ ನಂತರ ಅಂದರೆ ಬೆ. 10.25 ಆದ ನಂತರ ಕೊಡಲಾಗುವುದು.
3. ಪ್ರಶ್ನೆ ಪತ್ರಿಕೆಯ ಕ್ರಮ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆಯಬೇಕು.
4. ಪ್ರಶ್ನೆ ಪತ್ರಿಕೆಯ ವರ್ಷನ್ ಕೋಡ್‌ನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕು.

**ಮಾಡಬೇಡಿ**

1. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ ಮಾರ್ಕ್‌ನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.
2. ಮೂರನೇ ಬೆಲ್ ಬೆ.10.30 ಕ್ಕೆ ಆಗುತ್ತದೆ. ಅಲ್ಲಿಯವರೆಗೂ,
   - ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಪಿನ್ ಅಥವಾ ಸೀಲ್ ಅನ್ನು ತೆಗೆಯಬಾರದು.
   - ಪ್ರಶ್ನೆ ಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು.
   - ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.

**ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು**

1. ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಯು ಒಂದು ಹೇಳಿಕೆಯನ್ನು ಒಳಗೊಂಡಿದ್ದು ಮತ್ತು 4 ಬಹು ಆಯ್ಕೆ ಉತ್ತರಗಳು ಇರುತ್ತವೆ.
2. ಮೂರನೇ ಬೆಲ್ ಅಂದರೆ ಬೆ. 10.30 ರ ನಂತರ ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಪಿನ್ / ಸೀಲ್ ತೆಗೆದು ಈ ಪ್ರಶ್ನೆ ಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಐಟಂಗಳು ಬಿಟ್ಟುಹೋಗಿದ್ದಲ್ಲಿ, ಅದನ್ನು ಖಚಿತಪಡಿಸಿಕೊಂಡು, ಈ ರೀತಿ ಆಗಿದ್ದರೆ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
3. ಮುಂದಿನ 120 ನಿಮಿಷಗಳಲ್ಲಿ
   - ಪ್ರತಿ ಪ್ರಶ್ನೆಯನ್ನು ಎಚ್ಚರಿಕೆಯಿಂದ ಓದಿ.
   - ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
   - ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣವಾಗಿ ತುಂಬುವುದು.

| ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿರುವ ವೃತ್ತಗಳನ್ನು ತುಂಬುವ ಸರಿಯಾದ ವಿಧಾನ: | (A) ● (C) (D) |
|---|---|

4. ಈ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
5. ಪ್ರಶ್ನೆ ಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ರಫ್ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
6. ಕೊನೆಯ ಬೆಲ್ ಅಂದರೆ ಮ. 12.30 ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ. ನಿಮ್ಮ ಎಡಗೈ ಹೆಬ್ಬೆರಳ ಗುರುತನ್ನು ನಿಗದಿತ ಜಾಗದಲ್ಲಿ ಹಾಕಿ.
7. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
8. ಕೊಠಡಿ ಮೇಲ್ವಿಚಾರಕರು, ಮೇಲ್ಭಾಗದ ಹಾಳೆಯನ್ನು (ಕೆಇಎ ಪ್ರತಿ) ಪ್ರತ್ಯೇಕಿಸಿ ತನ್ನ ವಶದಲ್ಲಿ ಇಟ್ಟುಕೊಂಡು ತಳಬದಿಯ ಯಥಾಪ್ರತಿಯನ್ನು ಅಭ್ಯರ್ಥಿಗಳಿಗೆ ಸ್ವಯಂ ಮೌಲ್ಯಮಾಪನಕ್ಕಾಗಿ ಮನೆಗೆ ಕೊಂಡೊಯ್ಯಲು ಕೊಡುತ್ತಾರೆ.
9. ಉತ್ತರ ಪತ್ರಿಕೆಯ ನಕಲನ್ನು ಒಂದು ವರ್ಷ ಕಾಲ ಸುರಕ್ಷಿತವಾಗಿ ಇಡಿ.

# ಸಾಮಾನ್ಯ ಕನ್ನಡ

1. ದ್ವಿರುಕ್ತಿಗೆ ಉದಾಹರಣೆ
   (A) ಮನಮನಗಳಲ್ಲಿ
   (B) ಬೈಗು ಬೆಳಗು
   (C) ಹಣ್ಣುಹಂಪಲು
   (D) ವಧುವರ

2. ಇವುಗಳಲ್ಲಿ ಅನುಕರಣವಾಚಕ ಪದ ಗುರುತಿಸಿ.
   (A) ನಡೆನಡೆ
   (B) ಬಂದೆಬಂದೆ
   (C) ಬನ್ನಿಬನ್ನಿ
   (D) ಜುಳುಜುಳು

3. ಜೋಡು ನುಡಿಗೆ ಉದಾಹರಣೆ
   (A) ಹಿರಿಮೆಗರಿಮೆ
   (B) ಕಿಲಕಿಲ
   (C) ಲಕಲಕ
   (D) ಡವಡವ

4. 'ತುತ್ತತುದಿ' ಎನ್ನುವುದು
   (A) ಜೋಡುನುಡಿ
   (B) ದ್ವಿರುಕ್ತಿ
   (C) ಪಡೆನುಡಿ
   (D) ಅನುಕರಣವಾಚಕ

5. 'ಸೋಲುಗೆಲುವು' ಎನ್ನುವುದು
   (A) ದ್ವಿರುಕ್ತಿ
   (B) ಅನುಕರಣವಾಚಕ
   (C) ಜೋಡುನುಡಿ
   (D) ಪಡೆನುಡಿ

ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪರ್ಯಾಯ ರೂಪಗಳಲ್ಲಿ ಶುದ್ಧರೂಪ ಗುರುತಿಸಿ.

6. (A) ಸ್ವಾತಂರ್ತ
   (B) ಸ್ವಾತಂತ್ರ
   (C) ಸ್ವಾತಾಂತ್ರ್ಯ
   (D) ಸ್ವಾತಂತ್ರ್ಯ

7. (A) ಸಾಮಾನ್ಯತೆ
   (B) ಸಮನತೆ
   (C) ಸಮಾನತೆ
   (D) ಸಮಾಣತೆ

8. (A) ಭ್ರತೃತ್ವ
   (B) ಭ್ರಾತೃತ್ವ
   (C) ಭ್ರಾತ್ರತ್ವ
   (D) ಭ್ರಾರ್ತತ್ವ

9. (A) ಪ್ರಜಾಪ್ರಭುತ್ವ (B) ಪ್ರಜೆಪ್ರಭುತ್ವ
(C) ಪ್ರಜಪ್ರಭುತ್ವ (D) ಪ್ರಜಾಪ್ರಭತ್ವ

10. (A) ಗಣರಾಜೋತ್ಸವ (B) ಗಣರಾಜ್ಯೋಸ್ತವ
(C) ಗನರಾಜ್ಯೋತ್ಸವ (D) ಗಣರಾಜ್ಯೋತ್ಸವ

11. 'ಜೀವನ' ಎಂಬುದಕ್ಕೆ ಯಾವುದು ಸಮಾನಾರ್ಥಕ ಪದವಲ್ಲ ?
(A) ಬಾಳ್ವೆ (B) ಬದುಕು
(C) ಚದುರಂಗ (D) ಬದೂಕು

12. 'ಚಂದ್ರ' ಎಂಬುದಕ್ಕೆ ಯಾವುದು ಸಮಾನಾರ್ಥಕ ಪದವಲ್ಲ ?
(A) ಚಂದಿರ (B) ಚಿಕ್ಕೆ
(C) ಶಶಿ (D) ತಿಂಗಳು

13. 'ಮಡದಿ' ಎಂಬುದಕ್ಕೆ ಯಾವುದು ಸಮಾನಾರ್ಥಕ ಪದವಲ್ಲ ?
(A) ಅನುರಾಗ (B) ಸತಿ
(C) ಪತ್ನಿ (D) ಭಾರ್ಯೆ

14. 'ಭೂಮಿ' ಎಂಬುದಕ್ಕೆ ಯಾವುದು ಸಮಾನಾರ್ಥಕ ಪದವಲ್ಲ ?
(A) ಧರಣಿ (B) ಧರೆ
(C) ಧರಿತ್ರಿ (D) ಸಹನ

15. 'ಕಡಲು' ಎಂಬುದಕ್ಕೆ ಯಾವುದು ಸಮಾನಾರ್ಥಕ ಪದವಲ್ಲ ?
(A) ಗಂಭೀರ (B) ಸಮುದ್ರ
(C) ಶರಧಿ (D) ಸಾಗರ

16. 'ಅಂತರಂಗ' ಪದದ ವಿರುದ್ಧ ಪದ ಗುರುತಿಸಿ.
(A) ಮನಸ್ಸು (B) ಹೃದಯ
(C) ಬಹಿರಂಗ (D) ಒಳಗು

17. 'ವಿದೇಶ' ಪದದ ವಿರುದ್ಧ ಪದ ಗುರುತಿಸಿ.

(A) ಪರದೇಶ (B) ಸ್ವದೇಶ

(C) ಹೊರದೇಶ (D) ವಿದೇಹ

18. 'ಹತ್ತು' ಪದದ ವಿರುದ್ಧ ಪದ ಗುರುತಿಸಿ.

(A) ಏರು (B) ಸೇರು

(C) ಬೀಳು (D) ಇಳಿ

19. 'ಪ್ರಾಮಾಣಿಕ' ಪದದ ವಿರುದ್ಧ ಪದ ಗುರುತಿಸಿ.

(A) ಅಪ್ರಾಮಾಣಿಕ (B) ವಿಶ್ವಾಸಾರ್ಹ

(C) ನಂಬಿಕಸ್ತ (D) ವಂಚಕ

20. 'ಭಯ' ಪದದ ವಿರುದ್ಧ ಪದ ಗುರುತಿಸಿ.

(A) ಭೀತಿ (B) ಹೆದರಿಕೆ

(C) ನಿರ್ಭಯ (D) ಅಪಾಯ

21. 'ಅತಿವೃಷ್ಟಿ' ಪದದ ವಿರುದ್ಧ ಪದ

(A) ಮಹಾಪೂರ (B) ಅನಾವೃಷ್ಟಿ

(C) ಕ್ಷಾಮ (D) ಕಾರ್ಗಾಲ

22. 'ಸಹನೆ' ಪದದ ವಿರುದ್ಧ ಪದ

(A) ತಾಳ್ಮೆ (B) ಸ್ಥೈರಣೆ

(C) ಮುನಿ (D) ಅಸಹನೆ

23. 'ಕತ್ತಲು' ಪದದ ವಿರುದ್ಧ ಪದ

(A) ಬೆಳಕು (B) ಮಬ್ಬು

(C) ಅಂಧಕಾರ (D) ತಿಮಿರ

24. 'ಸೋಲು' ಪದದ ವಿರುದ್ಧ ಪದ

(A) ದಣಿವು (B) ಪರಾಭವ

(C) ಗೆಲುವು (D) ಅಪಜಯ

25. 'ದಾಸ್ಯ' ಪದದ ವಿರುದ್ಧ ಪದ

(A) ಅಧೀನತೆ (B) ವಿಮೋಚನೆ

(C) ಊಳಿಗ (D) ವಿವೇಚನೆ

26. 'ಅಳಿಲು ಸೇವೆ' ಎಂಬುದು

(A) ದ್ವಿರುಕ್ತಿ (B) ಜೋಡುನುಡಿ

(C) ಅನುಕರಣವಾಚಿ (D) ನುಡಿಗಟ್ಟು

27. 'ಗಾಳಿಮಾತು' ಎನ್ನುವುದರ ಅರ್ಥ

(A) ಪಿಸುಮಾತು (B) ಆಕಾಶವಾಣಿ

(C) ಸುಳ್ಳುಸುದ್ದಿ (D) ಉತ್ತೇಜನ

28. 'ಮಾತು ಬೆಳ್ಳಿ ಮೌನ ________' - ಪೂರ್ಣಗೊಳಿಸಿ.

(A) ಕಂಚು (B) ಬಂಗಾರ

(C) ಹಿತ್ತಾಳೆ (D) ಸೀಸ

29. '________ ಸಂಗ ಹೆಜ್ಜೇನು ಸವಿದಂತೆ.'

(A) ದುರ್ಜನರ (B) ಸಜ್ಜನರ

(C) ಕುಟಿಲರ (D) ಕುಜನರ

ಈ ಗದ್ಯಭಾಗವನ್ನು ಗ್ರಹಿಸಿ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿ.

ಭರತ ಖಂಡದಲ್ಲಿ ದರಿದ್ರ ದೀನರ ಸ್ಥಿತಿಯನ್ನು ಆಲೋಚಿಸಿದರೆ ನನ್ನ ಹೃದಯ ಮರುಗುವುದು. ಪ್ರತಿದಿನವೂ ಅವರು ಅಧಃಪಾತಾಳಕ್ಕೆ ಹೋಗುತ್ತಿರುವರು. ನಿರ್ದಯಿ ಸಮಾಜ ಅವರ ಮೇಲೆ ಕರೆವ ಪೆಟ್ಟಿನ ಸುರಿಮಳೆಯನ್ನು ಅವರು ಅನುಭವಿಸುತ್ತಿರುವರು. ಎಲ್ಲಿಯವರೆವಿಗೂ ಕೋಟ್ಯಂತರ ಜನರು ಹಸಿವು ಮತ್ತು ಅಜ್ಞಾನದಲ್ಲೇ ಜೀವ ಹಿಡಿದುಕೊಂಡು ನರಳುತ್ತಿರುವರೋ ಅಲ್ಲಿಯವರೆಗೆ ಅವರ ತ್ಯಾಗದಿಂದ ವಿದ್ಯಾವಂತನಾಗಿ ಅವರನ್ನೇ ತಿರಸ್ಕರಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು ದ್ರೋಹಿ ಎನ್ನುತ್ತೇನೆ. ತಮ್ಮ ಚೆಲುವು ಒಯ್ಯಾರಗಳಿಂದ ಮೆರೆದಾಡುತ್ತ ಬಡಜನರನ್ನು ಗಾಣದೆತ್ತಿನಂತೆ ದುಡಿಸುವವರನ್ನು ಮಹಾಪಾಪಿಗಳೆನ್ನುತ್ತೇನೆ. ನಮ್ಮ ಜನಾಂಗದ ಮಹಾಪಾತಕವೇ ಜನಸಾಮಾನ್ಯರನ್ನು ನಿರ್ಲಕ್ಷಿಸಿದ್ದು, ಇದೇ ನಮ್ಮ ಅವನತಿಗೆ ಕಾರಣ. ಇಲ್ಲಿನ ಜನಸಾಮಾನ್ಯರು ವಿದ್ಯಾವಂತರಾಗಿ ಅವರಿಗೆ ಸಾಕಷ್ಟು ಊಟ ಬಟ್ಟೆ ದೊರಕುವಂತೆ ಮಾಡಿ ಅವರ ಬಗ್ಗೆ ಕಾಳಜಿ ವಹಿಸದಿದ್ದಲ್ಲಿ ಯಾವ ರಾಜಕೀಯದಿಂದಲೂ ಏನೂ ಪ್ರಯೋಜನವಿಲ್ಲ. ಭವಿಷ್ಯ ಭಾರತದ ನಿರ್ಮಾಣವು ನಮ್ಮ ಕಾಯಕವನ್ನಾಧರಿಸಿದೆ. ಎಲ್ಲವೂ ಭಾರತದ ಯುವ ಜನರನ್ನು ಅವಲಂಬಿಸಿಕೊಂಡಿದೆ. (ಸ್ವಾಮಿ ವಿವೇಕಾನಂದ)

30. ದರಿದ್ರ ದೀನರ ಸ್ಥಿತಿ ಕಂಡಾಗ ಹೃದಯ ಏನಾಗುವುದು ?

(A) ಹಿಗ್ಗುವುದು (B) ಕೊರಗದು
(C) ಕುಗ್ಗದು (D) ಮರುಗುವುದು

31. ಪೆಟ್ಟಿನ ಸುರಿಮಳೆ ಕರೆವ/ಕೊಡುವ ಸಮಾಜ ಎಂತಹುದು ?

(A) ನಿರ್ದಯಿ (B) ನಲುಮೆಯ
(C) ಅನುಕಂಪಿತ (D) ದಯಾವಂತ

32. ಜನಸಾಮಾನ್ಯರ ತ್ಯಾಗದಿಂದಲೇ ವಿದ್ಯಾವಂತರಾಗಿ ಅವರನ್ನೇ ತಿರಸ್ಕರಿಸುವವರನ್ನು ಏನೆಂದು ಕರೆಯಲಾಗಿದೆ ?

(A) ವಿಶ್ವಾಸಿ (B) ಜನನಾಯಕ
(C) ದ್ರೋಹಿ (D) ಜನಮಿತ್ರ

33. ಭವಿಷ್ಯ ಭಾರತದ ನಿರ್ಮಾಣವು ಯಾವುದನ್ನು ಆಧರಿಸಿದೆ ?

(A) ಉಪದೇಶ (B) ಕಾಯಕ
(C) ಪ್ರವಚನ (D) ಆಶ್ವಾಸನೆ

34. ಯಾರನ್ನು ನಿರ್ಲಕ್ಷಿಸಿದ್ದರಿಂದ ನಮ್ಮ ಅವನತಿಗೆ ಕಾರಣವಾಯಿತು ?

(A) ಜನ ಮೇಡಕ (B) ಜನ ಶೋಷಕ
(C) ಜನಸಾಮಾನ್ಯ (D) ಜನ ನಿಂದಕ

35. ಭಾರತದ ಭವಿಷ್ಯ ಯಾವ ಜನರನ್ನು ಅವಲಂಬಿಸಿಕೊಂಡಿದೆ ?

(A) ಸೋಗಲಾಡಿ (B) ಯುವ
(C) ಪುಢಾರಿ (D) ಡಾಂಭಿಕ

36. ಕನ್ನಡ ವರ್ಣಮಾಲೆಯಲ್ಲಿ ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು

(A) ಯೋಗವಾಹಗಳು (B) ಅವರ್ಗೀಯ ವ್ಯಂಜನಗಳು

(C) ವರ್ಗೀಯ ವ್ಯಂಜನಗಳು (D) ಸ್ವರಗಳು

37. "ಕ ಚ ಟ ತ ಪ" – ಈ ಅಕ್ಷರಗಳು ವರ್ಣಮಾಲೆಯಲ್ಲಿ

(A) ಅಲ್ಪಪ್ರಾಣಗಳು (B) ಮಹಾಪ್ರಾಣಗಳು

(C) ಸ್ವರಗಳು (D) ಅನುನಾಸಿಕಗಳು

38. ಇವುಗಳಲ್ಲಿ ಒಂದು ಪದ ರೂಢನಾಮವಲ್ಲ

(A) ನೆಲ (B) ಆಕಾಶ

(C) ಸಹ್ಯಾದ್ರಿ (D) ನದಿ

39. ಗುಣವಾಚಕಕ್ಕೆ ಉದಾಹರಣೆ

(A) ಭರತ (B) ಭೂಮಿ

(C) ತಾಯಿ (D) ಒಳ್ಳೆಯ

40. 'ಕವಯಿತ್ರಿ' ಪದವು

(A) ಭಾವನಾಮ (B) ಪುಲ್ಲಿಂಗ

(C) ಸ್ತ್ರೀಲಿಂಗ (D) ನಪುಂಸಕಲಿಂಗ

41. ವರ್ತಮಾನ ಕಾಲದ ಕಾಲಸೂಚಕ ಪ್ರತ್ಯಯ

(A) ದ (B) ಉತ್ತ

(C) ಉವ (D) ವ

42. ಕನ್ನಡದಲ್ಲಿ ಇರುವ ಸಂಧಿಗಳು

(A) ಎರಡು (B) ಮೂರು

(C) ನಾಲ್ಕು (D) ಏಳು

43. ಹಳಗನ್ನಡದಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯ

(A) ಒಳ್ (B) ಇಂದಂ

(C) ಅ (D) ಅತ್ತಣಿಂ

44. "ಪ್ರೀತಿಯ ಹಣತೆಯ ಹಚ್ಚೋಣ" ಇಲ್ಲಿ ಬಳಸಿರುವ ಲೇಖನ ಚಿಹ್ನೆ

(A) ಭಾವಸೂಚಕ
(B) ವಿವರಣ
(C) ಆವರಣ
(D) ಉದ್ಧರಣ

45. 'ಶುಭವಾಗಲಿ' ಈ ಪದವು

(A) ವಿಧ್ಯರ್ಥಕ
(B) ನಿಷೇಧಾರ್ಥಕ
(C) ಸಂಭಾವನಾರ್ಥ
(D) ಸಾಪೇಕ್ಷ

46. 'ಅಕ್ಷರ' ಪದದ ತದ್ಭವ ರೂಪ

(A) ವಿದ್ಯೆ
(B) ಅಕ್ಕರೆ
(C) ಅಕ್ಕರ
(D) ಅಕ್ಷಯ

47. 'ಕತ್ತುರಿ' ಪದದ ತತ್ಸಮ ರೂಪ

(A) ಕನಕ
(B) ಕಸ್ತೂರಿ
(C) ಕಲಶ
(D) ಕವನ

48. ಇವುಗಳಲ್ಲಿ ದೇಶ್ಯಪದ

(A) ದಮ್ಮಡಿ / ಮಮ್ಮಡಿ
(B) ಇನಾಮು
(C) ಕಿಮ್ಮತ್ತು
(D) ಉಪ್ಪು

49. 'ಮೇಷ್ಟ್ರು' ಪದದ ಮೂಲರೂಪ

(A) ಮೇಷ್ಟರು
(B) ಮಾಸ್ತರ
(C) ಮಾಸ್ಟರ್
(D) ಮಾಷ್ಟರು

50. 'ಔಸ್ತಿ' ಪದದ ಗ್ರಾಂಥಿಕ ರೂಪ

(A) ಅಸ್ತಿ
(B) ಔಷಧಿ
(C) ಅವಸ್ತಿ
(D) ಅವಸ್ಥೆ

## ಸಾಮಾನ್ಯ ಜ್ಞಾನ

51. ಹೊಂದಿಸಿ ಬರೆಯಿರಿ.

| | A | | B |
|---|---|---|---|
| a. | ರತ್ನಾಕರ ವರ್ಣಿ | i. | ಗದುಗಿನ ಭಾರತ |
| b. | ಕುಮಾರ ವ್ಯಾಸ | ii. | ಮಧುರಾ ವಿಜಯಂ |
| c. | ಲಕ್ಕಣ್ಣ ದಂಡೇಶ | iii. | ಭರತೇಶ ವೈಭವ |
| d. | ಗಂಗಾದೇವಿ | iv. | ಶಿವತತ್ವ ಚಿಂತಾಮಣಿ |

| | a | b | c | d |
|---|---|---|---|---|
| (A) | iii | i | iv | ii |
| (B) | iv | ii | i | iii |
| (C) | iv | i | iii | ii |
| (D) | ii | iii | iv | i |

52. ಜೈನರ ಮೊದಲನೆ ತೀರ್ಥಂಕರ

(A) ಪಾರ್ಶ್ವನಾಥ (B) ಋಷಭ

(C) ವರ್ಧಮಾನ ಮಹಾವೀರ (D) ಆದಿನಾಥ

53. ಕದಂಬರ ರಾಜಧಾನಿಯಾಗಿದ್ದ ಬನವಾಸಿಯು ಈಗಿನ ಕರ್ನಾಟಕದ ಯಾವ ಜಿಲ್ಲೆಯಲ್ಲಿದೆ ?

(A) ಧಾರವಾಡ (B) ದಕ್ಷಿಣ ಕನ್ನಡ

(C) ಉಡುಪಿ (D) ಉತ್ತರ ಕನ್ನಡ

54. ದ್ವೈತ ಸಿದ್ಧಾಂತದ ಪ್ರತಿಪಾದಕರು

(A) ಶಂಕರಾಚಾರ್ಯ (B) ರಾಮಾನುಜಾಚಾರ್ಯ

(C) ಮಧ್ವಾಚಾರ್ಯ (D) ಬಸವೇಶ್ವರ

55. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಯಾವ ವರ್ಷದಲ್ಲಿ ನಡೆಯಿತು ?

(A) 1847 (B) 1857

(C) 1867 (D) 1877

56. ದೊರೆ ಹಾಲನು ಈ ಕೆಳಗಿನ ಯಾವ ಗ್ರಂಥದ ಕರ್ತೃವಾಗಿದ್ದಾನೆ ?

(A) ಗಜಶಾಸ್ತ್ರ (B) ವಡ್ಡಕಥೆ

(C) ಗಾಥಾಸಪ್ತಶತಿ (D) ಚಾವುಂಡರಾಯಪುರಾಣ

57. ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸನೆಂದು ಈ ಕೆಳಗಿನವರಲ್ಲಿ ಯಾರನ್ನು ಕರೆಯುತ್ತಾರೆ ?

(A) ಶ್ರೀಕೃಷ್ಣದೇವರಾಯ (B) ಪ್ರೌಢದೇವರಾಯ

(C) ಬುಕ್ಕರಾಯ (D) ಹರಿಹರ

58. "ಗಡಿನಾಡ ಗಾಂಧಿ" ಎಂದು ಯಾರನ್ನು ಹೆಸರಿಸಲಾಗಿದೆ ?

(A) ಟಿ.ಬಿ. ಕುನ್ಹಾ (B) ಮಹಾತ್ಮ ಗಾಂಧೀಜಿ

(C) ಖಾನ್ ಅಬ್ದುಲ್ ಗಫಾರ್ ಖಾನ್ (D) ನೆಲ್ಸನ್ ಮಂಡೇಲ

59. ಮೌರ್ಯರ ಆಸ್ಥಾನದಲ್ಲಿದ್ದ ಕೌಟಿಲ್ಯನು ಬರೆದ ಗ್ರಂಥ

(A) ರಾಜ್ಯಶಾಸ್ತ್ರ (B) ಸಮಾಜಶಾಸ್ತ್ರ

(C) ಅರ್ಥಶಾಸ್ತ್ರ (D) ಜೀವಶಾಸ್ತ್ರ

60. 2011 ರ ಜನಗಣತಿಯ ಪ್ರಕಾರ ಯಾವ ರಾಜ್ಯವು ಅತಿಕಡಿಮೆ ಜನಸಂಖ್ಯೆಯನ್ನು ಹೊಂದಿದೆ ?

(A) ಸಿಕ್ಕಿಂ (B) ಗೋವಾ

(C) ಅಸ್ಸಾಂ (D) ಪಂಜಾಬ್

61. ಭಾರತದಲ್ಲಿ ಜನಗಣತಿಯು ಪ್ರತಿ ಎಷ್ಟು ವರ್ಷಗಳಿಗೊಮ್ಮೆ ನಡೆಸಲಾಗುವುದು ?

(A) 4 ವರ್ಷ (B) 6 ವರ್ಷ

(C) 8 ವರ್ಷ (D) 10 ವರ್ಷ

62. "ರಾಷ್ಟ್ರೀಯ ಉಳಿತಾಯ ಪತ್ರ" ವನ್ನು ವಿತರಣೆ ಮಾಡುವ ಸಂಸ್ಥೆ

(A) ಸೆಂಟ್ರಲ್ ಬ್ಯಾಂಕ್ (B) ಅಂಚೆ ಕಛೇರಿ

(C) ಬಿ.ಎಸ್.ಎನ್.ಎಲ್. (D) ವಾಣಿಜ್ಯ ಬ್ಯಾಂಕ್

63. ಕೇಂದ್ರದ ನೀತಿ ಆಯೋಗದ ಹಾಲಿ ಅಧ್ಯಕ್ಷರು

(A) ರಾಷ್ಟ್ರಪತಿ (B) ಉಪರಾಷ್ಟ್ರಪತಿ

(C) ಪ್ರಧಾನಮಂತ್ರಿ (D) ಲೋಕ ಸಭಾಧ್ಯಕ್ಷರು

64. ಸಾರ್ವಜನಿಕ ಹಣಕಾಸಿಗೆ ಸಂಬಂಧಪಟ್ಟ ಹೇಳಿಕೆ

(A) ವ್ಯಕ್ತಿ ಅಥವಾ ಕುಟುಂಬಕ್ಕೆ ಸಂಬಂಧಪಟ್ಟಿರುವುದು

(B) ಆದಷ್ಟು ಗೌಪ್ಯವಾಗಿಡಲಾಗುತ್ತದೆ

(C) ಕುಟುಂಬದ ಪ್ರಗತಿಗೆ ಪೂರಕವಾಗಿರುತ್ತದೆ

(D) ಶಾಸನ ಸಭೆಗಳಲ್ಲಿ ಚರ್ಚಿಸಿ ತೀರ್ಮಾನಿಸಿ ಸಾರ್ವಜನಿಕರ ಬಳಕೆಗೆ

65. ಈ ಕೆಳಗಿನ ಯಾವುದರ ಆಧಾರದ ಮೇಲೆ "ಜನರ ಜೀವನಮಟ್ಟ" ವನ್ನು ಅಳೆಯಲಾಗುತ್ತದೆ ?

(A) ಅಭಿವೃದ್ಧಿ (B) ಕೈಗಾರಿಕೆಗಳು

(C) ಕೃಷಿ (D) ನೀರಾವರಿ

66. ಜಪಾನ್ : ಯೆನ್ :: ರಷ್ಯಾ :

(A) ಡಾಲರ್ (B) ರೂಬಲ್

(C) ಪೌಂಡ್ (D) ಮಾರ್ಕ್

67. ಭಾರತದಲ್ಲಿ ಬೇಸಿಗೆ ಕಾಲವು ಈ ಅವಧಿಯಲ್ಲಿ ಕಂಡು ಬರುತ್ತದೆ

(A) ಡಿಸೆಂಬರ್ ನಿಂದ ಫೆಬ್ರವರಿ (B) ಜೂನ್ ನಿಂದ ಸೆಪ್ಟೆಂಬರ್

(C) ಅಕ್ಟೋಬರ್ ನಿಂದ ನವೆಂಬರ್ (D) ಮಾರ್ಚ್ ನಿಂದ ಮೇ

68. ಭಾರತದ ಈಶಾನ್ಯ ಭಾಗದಲ್ಲಿ ಪ್ರಮುಖವಾಗಿ ಕಂಡು ಬರುವ ಮಣ್ಣು

(A) ಮೆಕ್ಕಲು ಮಣ್ಣು (B) ಕೆಂಪು ಮಣ್ಣು

(C) ಕಪ್ಪು ಮಣ್ಣು (D) ಜೇಡಿ ಮಣ್ಣು

69. ಕರ್ನಾಟಕ ರಾಜ್ಯದ ಯಾವ ಜಿಲ್ಲೆಯು ಹೆಚ್ಚು ಕಾಲುವೆ ನೀರಾವರಿ ಹೊಂದಿದೆ ?

(A) ಬೆಳಗಾವಿ (B) ಶಿವಮೊಗ್ಗ

(C) ರಾಯಚೂರು (D) ಮಂಡ್ಯ

70. ಈ ಕೆಳಗಿನ ಯಾವ ಬಂದರನ್ನು "ಭಾರತದ ಹೆಬ್ಬಾಗಿಲು" ಎನ್ನುವರು ?

(A) ಕೋಲ್ಕತ್ತ (B) ಮುಂಬೈ

(C) ಕೊಚ್ಚಿ (D) ಮರ್ಮಗೋವಾ

71. ಭಾರತದ ಅತ್ಯಂತ ಎತ್ತರದ ಅಣೆಕಟ್ಟು

(A) ಕೋಸಿ (B) ಹಿರಾಕುಡ್

(C) ಆಲಮಟ್ಟಿ (D) ತೆಹ್ರಿ

72. ಕೊಂಕಣ ರೈಲ್ವೆಯು ಈ ರಾಜ್ಯಗಳಲ್ಲಿವೆ

(A) ಗೋವಾ-ಮಹರಾಷ್ಟ್ರ-ಗುಜರಾತ್ (B) ಮಹರಾಷ್ಟ್ರ-ಕರ್ನಾಟಕ-ಕೇರಳ

(C) ಕರ್ನಾಟಕ-ಗೋವಾ-ಮಹರಾಷ್ಟ್ರ (D) ಕರ್ನಾಟಕ-ಗೋವಾ-ಕೇರಳ

73. ಈ ನಗರವನ್ನು "ಸಕ್ಕರೆಯ ಜಿಲ್ಲೆ" ಎಂದು ಕರೆಯುತ್ತಾರೆ.

(A) ಮಂಡ್ಯ
(B) ಬೆಳಗಾವಿ
(C) ಮೈಸೂರು
(D) ಬಾಗಲಕೋಟೆ

74. ಹೆಚ್ಚು ಅರಣ್ಯಕ್ಷೇತ್ರ ಹೊಂದಿರುವ ರಾಜ್ಯ ಮಧ್ಯಪ್ರದೇಶ ::
ಅತ್ಯಂತ ಕಡಿಮೆ ಅರಣ್ಯ ಕ್ಷೇತ್ರ ಹೊಂದಿರುವ ರಾಜ್ಯ ________

(A) ಹರ್ಯಾಣ
(B) ಗುಜರಾತ್
(C) ಬಿಹಾರ
(D) ಉತ್ತರಪ್ರದೇಶ

75. "ಖಗೋಳ ಶಾಸ್ತ್ರದ ಬೈಬಲ್"ಎಂದು ಯಾವ ಗ್ರಂಥವನ್ನು ಕರೆಯುತ್ತಾರೆ ?

(A) ಬೃಹತ್ ಸಂಹಿತ
(B) ಬೃಹತ್ ಜಾತಕ
(C) ಪಂಚ ಸಿದ್ಧಾಂತಿಕ
(D) ಲಘು ಜಾತಕ

76. ಬೀಜಗಣಿತ ಪದ್ಧತಿಯನ್ನು ಭಾರತದಲ್ಲಿ ಮೊದಲಿಗೆ ಪರಿಚಯಿಸಿದವನು

(A) ಪ್ಲೇಟೋ
(B) ಸಾಕ್ರೆಟಿಸ್
(C) ಅರಿಸ್ಟಾಟಲ್
(D) ಆರ್ಯಭಟ

77. ಭಾರತದ ಕ್ಷಿಪಣಿ ಪರೀಕ್ಷಾ ಸ್ಥಳ

(A) ಲಕ್ಷದ್ವೀಪ
(B) ವ್ಹೀಲರ್ ದ್ವೀಪ
(C) ಬ್ಯಾರನ್ ದ್ವೀಪ
(D) ಗ್ರೇಟ್ ನಿಕೋಬಾರ್ ದ್ವೀಪ

78. ನೌಕಾಯಾನದಲ್ಲಿ ದೂರ ಮತ್ತು ಮಾರ್ಗಗಳನ್ನು ಅರಿಯಲು ಬಳಸುವ ಸಾಧನ

(A) ದಿಕ್ಸೂಚಿ
(B) ದೂರದರ್ಶಕ
(C) ಉಪಗ್ರಹ
(D) ಆಸ್ಟ್ರೋಲೋಬ್

79. "ಮ್ಯೂಲ್ ಯಂತ್ರ" ದ ಸಂಶೋಧಕ

(A) ಜೇಮ್ಸ್ ಹಾರ್ ಗ್ರೀವ್ಸ್
(B) ಜೇಮ್ಸ್ ವ್ಯಾಟ್
(C) ಎಡ್ಮಂಡ್ ಕಾರ್ಟ್ ರೈಟ್
(D) ಸ್ಯಾಮ್ಯುಯಲ್ ಕ್ಯಾಂಪ್ಟನ್

80. ಉಷ್ಣತೆ : ಥರ್ಮಾಮೀಟರ್ :: ಆರ್ದ್ರತೆ :

(A) ಅನಿಮಾ ಮೀಟರ್
(B) ವಿಂಡ್ ವೇನ್
(C) ಹೈಗ್ರೋ ಮೀಟರ್
(D) ಬ್ಯಾರೋಮೀಟರ್

81. ಈ ಕೆಳಗಿನ ಯಾವ ರಾಷ್ಟ್ರದಲ್ಲಿ ಉಷ್ಣತೆಯ ಪ್ರಮಾಣವನ್ನು "ಫ್ಯಾರನ್ ಹೀಟ್" ಥರ್ಮಾಮೀಟರಿನಲ್ಲಿ ಅಳೆಯುತ್ತಾರೆ ?

(A) ಯು.ಎಸ್.ಎ.
(B) ಭಾರತ
(C) ಇಂಗ್ಲೆಂಡ್
(D) ಈ ಮೇಲಿನ ಎಲ್ಲವೂ

82. ಈ ಕೆಳಗೆ ಹೆಸರಿಸಿರುವ ಅನಿಲಗಳನ್ನು ವಾತಾವರಣದಲ್ಲಿನ ಅವುಗಳ ಪ್ರಮಾಣದ ಆಧಾರದ ಮೇಲೆ ಕ್ರಮವಾಗಿ ಬರೆಯಿರಿ. (ಹೆಚ್ಚು ಪ್ರಮಾಣದಿಂದ ಕಡಿಮೆ ಪ್ರಮಾಣ)

(A) ಆಕ್ಸಿಜನ್, ಕಾರ್ಬನ್ ಡೈ ಆಕ್ಸೈಡ್, ನೈಟ್ರೋಜನ್, ಆರ್ಗ್ಯಾನ್
(B) ನೈಟ್ರೋಜನ್, ಆಕ್ಸಿಜನ್, ಆರ್ಗ್ಯಾನ್, ಕಾರ್ಬನ್ ಡೈ ಆಕ್ಸೈಡ್
(C) ನೈಟ್ರೋಜನ್, ಆರ್ಗ್ಯಾನ್, ಕಾರ್ಬನ್ ಡೈ ಆಕ್ಸೈಡ್, ಆಕ್ಸಿಜನ್
(D) ನೈಟ್ರೋಜನ್, ಕಾರ್ಬನ್ ಡೈ ಆಕ್ಸೈಡ್, ಆಕ್ಸಿಜನ್, ಆರ್ಗ್ಯಾನ್

83. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಸ್ಥಳೀಯ ಸಂಸ್ಥೆಯ ಚುನಾವಣೆ

(A) ಗ್ರಾಮ ಪಂಚಾಯ್ತಿ
(B) ಪಟ್ಟಣ ಪಂಚಾಯ್ತಿ
(C) ಪುರಸಭೆ
(D) ತಾಲ್ಲೂಕು ಮತ್ತು ಜಿಲ್ಲಾ ಪಂಚಾಯ್ತಿ

84. ಭಾರತದ ವಾಯುನೆಲೆಯ ಮೇಲೆ ಇತ್ತೀಚೆಗೆ ಪಾಕ್ ನುಸುಳುಕೋರರು ದಾಳಿ ಮಾಡಿದ ಸ್ಥಳ

(A) ರಾಜ್ ಕೋಟ್
(B) ಪಠಾಣ್ ಕೋಟ್
(C) ಸಿಯಾಲ್ ಕೋಟ್
(D) ಕೆಂಪುಕೋಟೆ

85. ಭಾರತದ ಸೈನಿಕರು ಕಾಯುತ್ತಿರುವ ಎತ್ತರದ ಗಡಿ ಹಿಮ ಸ್ಥಳ

(A) ಹಿಸ್ಸಾರ್
(B) ಬೋಲ್ಟೇರ್
(C) ಸಿಯಾಚಿನ್
(D) ಕಾರ್ಗಿಲ್

86. ಹರ್ಯಾಣ ರಾಜ್ಯದಲ್ಲಿ ಮೀಸಲಾತಿಗಾಗಿ ಯಾವ ಸಮುದಾಯದವರು ಹೋರಾಟ ನಡೆಸಿದರು ?

(A) ಜಾಟರು
(B) ಪಟೇಲ್
(C) ಪಠಾಣರು
(D) ಕಾಪು

87. 2015 ನೇ ಸಾಲಿನ 'ದಾನ ಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿ ಪಡೆದವರು

(A) ಬಿ.ಎ. ಸನದಿ
(B) ನೇಮಿಚಂದ್ರ
(C) ಸಿಂಧೂರ
(D) ಡಾ. ಎಂ. ಚಿದಾನಂದಮೂರ್ತಿ

88. ಸೆರೆವಾಸ ಅನುಭವಿಸಿ ಇತ್ತೀಚೆಗೆ ಬಿಡುಗಡೆಯಾದ ಹಿಂದಿ ಚಲನಚಿತ್ರ ನಟ

(A) ಸುನೀಲ್ ದತ್ (B) ಶಾರುಖ್ ಖಾನ್

(C) ಸಲ್ಮಾನ್ ಖಾನ್ (D) ಸಂಜಯ್ ದತ್

89. ಭಾರತಕ್ಕೆ ಇತ್ತೀಚೆಗೆ ಭೇಟಿ ನೀಡಿದ ಪ್ರಧಾನಿ ಕೆ.ಪಿ. ಒಲಿಯವರು ಯಾವ ದೇಶದವರು ?

(A) ಶ್ರೀಲಂಕಾ (B) ಭೂತಾನ್

(C) ನೇಪಾಳ (D) ಅಫ್ಘಾನಿಸ್ತಾನ

90. ಕೇಂದ್ರ ಸರ್ಕಾರ ಆಯ್ಕೆ ಮಾಡಿದ ಭಾರತದ ನಂ. 1 ಸ್ವಚ್ಛನಗರ

(A) ಮೈಸೂರು (B) ದೆಹಲಿ

(C) ಬೆಂಗಳೂರು (D) ವಿಶಾಖಪಟ್ಟಣ

91. ಕರ್ನಾಟಕದ ಯಾವ ವಿದ್ಯುದಾಗಾರವು ಇತ್ತೀಚೆಗೆ ಬೆಂಕಿ ಅವಘಡಕ್ಕೊಳಪಟ್ಟಿತ್ತು ?

(A) ತುಂಗಭದ್ರಾ (B) ಶರಾವತಿ

(C) ಕಾಳಿ (D) ಕೈಗಾ

92. 2016 ರ ರಾಷ್ಟ್ರೀಯ ರಣಜಿ ಕ್ರಿಕೆಟ್ ಟ್ರೋಫಿ ಗೆದ್ದ ರಾಜ್ಯ

(A) ಕರ್ನಾಟಕ (B) ತಮಿಳುನಾಡು

(C) ಆಂಧ್ರ ಪ್ರದೇಶ (D) ಮಹರಾಷ್ಟ್ರ (ಮುಂಬೈ)

93. ಭಾರತದ ಕೇಂದ್ರ ಶಾಸಕಾಂಗವನ್ನು ಈ ಕೆಳಗಿನ ಯಾವ ಹೆಸರಿನಿಂದ ಕರೆಯಲಾಗುತ್ತದೆ ?

(A) ಡಯಟ್ (B) ಸಂಸತ್ತು

(C) ಕಾಂಗ್ರೆಸ್ (D) ಕೋರ್ಟ್ಸ್

94. ಭಾರತದಲ್ಲಿ ಮತ ಚಲಾಯಿಸುವ ಹಕ್ಕಿನ ಕನಿಷ್ಠ ವಯಸ್ಸು

(A) 21 ವರ್ಷ (B) 20 ವರ್ಷ

(C) 19 ವರ್ಷ (D) 18 ವರ್ಷ

95. ರಾಜ್ಯಗಳ ರಾಜ್ಯಪಾಲರನ್ನು ಯಾರು ನೇಮಿಸುವರು ?

(A) ಪ್ರಧಾನಮಂತ್ರಿ (B) ಮುಖ್ಯಮಂತ್ರಿ

(C) ರಾಷ್ಟ್ರಪತಿ (D) ಉಪರಾಷ್ಟ್ರಪತಿ

96. ಭಾರತದ ಸುಪ್ರೀಂಕೋರ್ಟ್ ಯಾವ ದಿನಾಂಕದಂದು ಅಸ್ತಿತ್ವಕ್ಕೆ ಬಂದಿತು ?

(A) ಜನವರಿ 26, 1950 (B) ಜನವರಿ 27, 1950

(C) ಜನವರಿ 28, 1950 (D) ಜನವರಿ 29, 1950

97. "ಭಾರತದ ವಿದೇಶಾಂಗ ನೀತಿಯ ಶಿಲ್ಪಿ" ಎಂದು ಕರೆಯಲ್ಪಟ್ಟವರು

(A) ಪಂಡಿತ್ ಜವಹರ್ ಲಾಲ್ ನೆಹರೂ (B) ಮಹಾತ್ಮ ಗಾಂಧೀಜಿ

(C) ಸರ್ದಾರ್ ವಲ್ಲಭಭಾಯ್ ಪಟೇಲ್ (D) ಡಾ. ಬಿ.ಆರ್. ಅಂಬೇಡ್ಕರ್

98. ಹೊಂದಿಸಿ ಬರೆಯಿರಿ.

| | A | | B |
|---|---|---|---|
| a. | ಕನಿಷ್ಠ ಕೂಲಿ ಕಾಯಿದೆ | i. | 1961 |
| b. | ವರದಕ್ಷಿಣೆ ನಿಷೇಧ ಕಾಯಿದೆ | ii. | 1987 |
| c. | ಸತಿ ನಿಷೇಧ ಕಾಯಿದೆ | iii. | 1976 |
| d. | ಜೀತಪದ್ಧತಿ ನಿರ್ಮೂಲನ ಕಾಯಿದೆ | iv. | 1948 |

| | a | b | c | d |
|---|---|---|---|---|
| (A) | iii | ii | i | iv |
| (B) | i | iii | iv | ii |
| (C) | ii | iv | i | iii |
| (D) | iv | i | ii | iii |

99. ಭಾರತ ಸಂವಿಧಾನದ ಯಾವ ವಿಧಿಯು "ಶಿಕ್ಷಣವನ್ನು ಒಂದು ಹಕ್ಕು" ಎಂದು ಪರಿಗಣಿಸಿದೆ ?

(A) 20 ನೇ ವಿಧಿ (B) 21 ನೇ ವಿಧಿ

(C) 22 ನೇ ವಿಧಿ (D) 23 ನೇ ವಿಧಿ

100. ರಾಜ್ಯ ಶಾಸಕಾಂಗದ ಕೆಳಮನೆಯನ್ನು ಯಾವ ಹೆಸರಿನಿಂದ ಕರೆಯಲಾಗುತ್ತದೆ ?

(A) ರಾಜ್ಯಸಭೆ (B) ಲೋಕಸಭೆ

(C) ವಿಧಾನ ಸಭೆ (D) ವಿಧಾನ ಪರಿಷತ್

ಕಚ್ಚಾ ಕಾರ್ಯಕ್ಕಾಗಿ ಸ್ಥಳ